ಶ್ರೀ ಎಸ್. ನಿಜಲಿಂಗಪ್ಪ.—ಆದರೆ ಈಗ ಈ ನಾಯಕನಹಟ್ಟಿ ಕೆರೆಗೆನೀರನ್ನು ಕೊಟ್ಟರೆ ನಂಗೇನಹಳ್ಳಿ ಕೆರೆಯಲ್ಲಿ ಸಾಕಷ್ಟು ನೀರು ನಿಲ್ಲುತ್ತದೆಯೇ ಎಂಬ ವಿಚಾರದಲ್ಲಿ ನಂದೇಹ ಉಂಟಾಗಿದೆ. ಜಿನಿಗೆಹಳ್ಳದ ಕನೆಕ್ಷನ್ ತೆಗೆದುಕೊಂಡು ಈ ನಂಗೇನಹಳ್ಳಿ ಕೆರೆ ಏರಿಯನ್ನು ಎತ್ತರಿಸಿದಲ್ಲಿ ನಾಯ್ಕನ ಹಟ್ಟಿ ದೊಡ್ಡ ಕೆರೆಗೆ ನೀರನ್ನು ಕೊಡಲು ಸಾಧ್ಯವಾದರೂ ಆಗಬಹುದೇನೋ.

ಶ್ರೀ ಎಕ್. ಕೃಷ್ಣಸಿಂಗ್.—ಈ ನಾಲೆ ನಿರ್ಮಿಸುವುದಾದರೆ ಇದರ ಅನುಕೂಲ ಆ ಮುನೂರು ಗ್ರಾಮಕ್ಕೂ ಆಗುವಂತೆ ಪರಿಶೀಲಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆ ಮಾಡೋಣ.

ಶ್ರೀ ಬಿ. ಎಲ್. ಗೌಡ.—ಈ ವಿಷಯ ಈಗಿನ ರಾಜಕೀಯಕ್ಕಿಂತಲೂ ಬಹಳ ಹಳೇದು. ಆದುದರಿಂದ ಇದನ್ನು ಬೇಗ ಸರ್ವೆ ಮಾಡಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥಾದ್ದೇನೂ ಕಂಡುಬರಲಿಲ್ಲ. ಸರ್ವೆ ಮಾಡಿಸಲಾಗುತ್ತದೆ.

Construction of Mathighatta Channel in Krishnarajapet Taluk

*Q.—485. **Sri N. NANJE GOWDA** (Krishnarajapet).—

Will the Government be pleased to state:—

(*a*) when the construction of Mathighatta Channel in Krishnarajapet Taluk, Kasaba Hobli, was commenced;

(*b*) the estimated cost of the same and the amount spent during the year 1957;

(*c*) the total area that would be irrigated under this Channel;

(*d*) the difficulties in the way of completing the work of the channel;

(*e*) the time required to complete the same ?

A.—**Sri ALUR HANUMANTHAPPA** (Deputy Minister for Minor Irrigation).—

(*a*) In 1950-51.

(*b*) Estimated cost: Rs. 18,400. No amount was spent during the year 1957.

(*c*) 60 acres.

(*d*) and (*e*) Do not arise since the work is completed.

ಶ್ರೀ ಎಕ್. ನಂಜೇಗೌಡ.—ಈ ನಾಲೆ ಕಾರ್ಯ 50-51ರಲ್ಲೇ ಪ್ರಾರಂಭವಾಗಿದ್ದರೂ 1962 ಆದರೂ ಆ ಕೆಲಸವಿನ್ನೂ ಪೂರ್ತಿಯಾಗದಿರಲು ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಒಂದೂವರೆ ವರ್ಷದ ಕೆಳಗೆ ಈ ನಾಲೆಯ ದುರಸ್ತಿ ಬಗ್ಗೆ 18,400 ರೂ. ಗಳಿಗೆ ಒಂದು ಅಂದಾಜು ತಯಾರಾಗಿತ್ತು. ಆದರ ಪ್ರಕಾರ ಈಗಾಗಲೇ 16,900 ರೂ.ಗಳು ಖರ್ಚಾಗಿದೆ. ಆದರೆ ಈಗಿರತಕ್ಕ ಚಾನಲ್ಲಿಗೆ ಒಂದು ಫೀಡರ್ ಚಾನಲ್ ಮಾಡಲು 8,300 ರೂ. ಗಳಿಗೆ ಒಂದು ಅಂದಾಜು ತಯಾರಾಗಿ, ಆ ಕೆಲಸ ಈಗ ನಡೆಯುತ್ತಿದೆ.

ಶ್ರೀ ಎಕ್. ನಂಜೇಗೌಡ.—ಈ ಫೀಡರ್‌ಚಾನಲ್ಲಿನ ಕೆಲಸ ನಡೆಯಬೇಕೆಂಬ ಆಲೋಚನೆ ಮೊದಲು ಇರಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಈ ಫೀಡರ್‌ಚಾನಲ್ಲಿನಲ್ಲಿ ಸಾಕಷ್ಟು ನೀರು ಬರುತ್ತದೆಯೋ—ಇಲ್ಲವೋ ಎಂಬ ಸಂಶಯವಿತ್ತು. ಈಚೆಗೆ ಅದರಿಂದ ಹೆಚ್ಚಿನ ಅನುಕೂಲವಿದೆ ಎಂತ ತಿಳಿಯಬಂದುದರಿಂದ ಅದನ್ನು ಕೈಗೊಳ್ಳಲಾಯಿತು. ಆದರೆ ಈಗ ಅಕ್ಟಿಜಿಷ್ಟ್ ಪ್ರೊಸಿಡಿಂಗ್ಸ್‌ನ ಕೆಲಸ ನಡೆಯುತ್ತಿದೆ.

ಶ್ರೀ ಎಚ್. ನಂಜೇಗೌಡ.—ಆ ಅಕ್ವಿಜಿಷ್ಷ್ ಪ್ರೊಸೀಡಿಂಗ್ಸ್ ಕೆಲಸ ಪೂರ್ತಿಸಲು 13 ವರ್ಷಗಳು ಬೇಕಾಯಿತೇ ?

ಶ್ರೀ ಆಲೂರು ಹನುಮಂತಪ್ಪ.—ಒಂದು ಭಾಗದ ಕೆಲಸವೆಲ್ಲ ಪೂರ್ತಿಸಿದೆ. ಈ ಫೀಡರ ಚಾನಲ್ಲಿನ ಅಕ್ವಿಜಿಷ್ಷ್ ಕೆಲಸ ಮಾತ್ರ ಈಗ ನಡೆಯುತ್ತಿದೆ.

ಶ್ರೀ ಟಿ. ಮಾದಯ್ಯ ಗೌಡ.—1950-51ರಲ್ಲಿ ಕೈಗೊಂಡ 18,400 ರೂ. ಗಳ ಕೆಲಸ ಇಷ್ಟು ವರ್ಷಗಳಕಾಲವಾದರೂ ಮುಗಿಯದಿರಲು ಕಾರಣವೇನು ?

Sri ALUR HANUMANTHAPPA.—Sir, the work was taken up in 1950-51 and was completed in 1957. There was some delay of course. The delay was due to non-availability of proper contractors and delay in the land acquisition procedure.

ಶ್ರೀ ಎಚ್ ನಂಜೇಗೌಡ.—ಈ ಕಾಲುವೆಯನ್ನೂ ತೂಬಿನಿಂದ ತೆಗೆದುಕೊಳ್ಳಬೇಕೆಂದು ಮೊದಲು ಅಂದಾಜು ಮಾಡಿತ್ತಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಬಲಗಡೆಯ ತೂಬಿನಿಂದ ಕಾಲುವೆ ತೆಗೆಯಬೇಕೆಂದು ಮಾಡಿತ್ತು.

ಶ್ರೀ ಟಿ. ಮಾದಯ್ಯಗೌಡ.—1957ನೆಯ ಇಸವಿಯಲ್ಲಿ ಕೆಲಸ ಮುಗಿಯಿತು ಎಂದು ಹೇಳಿದರು. ಆಚ್ಚಾದ ಉತ್ತರದಲ್ಲಿ No amount was spent during the year 1957 ಎಂದು ಹೇಳಿದ್ದಾರೆ. ಇದು ಸರಿಯಾಗಿದೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—1957ರಲ್ಲಿ ಕೆಲಸ ಮುಗಿದಿದೆ ಎಂದು ಹೇಳಿದೆ.

ಶ್ರೀ ಎಚ್. ನಂಜೇಗೌಡ.—ನಾಲೆ ಕೆಲಸ ಪೂರ್ತಿಸಿದ್ದರೆ ತರೀ ವ್ಯವಸಾಯ ಮಾಡುತ್ತಿದ್ದಾರೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ನಾಲೆ ಕೆಲಸವನ್ನು ಪೂರ್ತಿ ಮಾಡಿಕೊಟ್ಟಮೇಲೆ ಆಗಲೇ ಬೇಕಲ್ಲವೇ ?

ಶ್ರೀ ಎಚ್. ಆರ್. ಕೇಶವಮೂರ್ತಿ.—Sixty acres would be irrigated ಎಂದು ಹೇಳಿದ್ದೀರಿ, ಈಗ ಎಷ್ಟು ಜಮೀನು ನೀರಾವರಿಯಾಗಿರುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಮೊದಲು ಮಾಡದಂಥ ಅಂದಾಜಿನಲ್ಲಿ 60 ಎಕರೆ ನೀರಾವರಿಗೆ ಬರುವುದಕ್ಕೆಸಾಧ್ಯವಾಗುತ್ತದೆಂದು ಇತ್ತು. ಈಗ ಮತ್ತೊಂದು feeder channel ಮಾಡಬೇಕೆಂದು ವ್ಯವಸ್ಥೆ ಮಾಡಿದೆ. ಅದಾದ ಮೇಲೆ 60 ಎಕರೆಗೆ ಸಂಪೂರ್ಣವಾಗಿ ನೀರು ಬರುತ್ತದೆ.

ಶ್ರೀ ಟಿ. ಮಾದಯ್ಯಗೌಡ.—1957 ನೆಯ ಇಸವಿಯಲ್ಲಿ ಕಾಲುವೆ ಕೆಲಸ ಪೂರ್ತಿಯಾದ ಮೇಲೆ ಅದರ ಕೆಳಗೆ ಇರತಕ್ಕ ಆಚ್ಚುಕಟ್ಟು ಪ್ರದೇಶವೆಷ್ಟು ?

ಶ್ರೀ ಅಲೂರು ಹನುಮಂತಪ್ಪ.—ಆ ಮಾಹಿತಿ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

Reservation of Seats in Technical Schools, Medical Schools and Colleges to the Students coming from Villages.

*Q.—486. Sri N. NANJE GOWDA (Krishnarajapet).—

Will the Government be pleased to state :—

(*a*) whether it has come to their notice that as per the present system, students coming from villages are not getting seats in Technical Schools, Medical Schools and Colleges according to the villages population ;

(*b*) if so, whether they intend to allot seats to students coming from villages by way of reserving seats according to the villages population ?